Publication : Vijayavani
Date: Sept 11, 2014
Page No: 12
Edition: All

ಬಂಗಾಳಿ, ಹಿಂದಿ, ಇಂಗ್ಲಿಷ್ ಮತ್ತು ತಮಿಳು ಸಿನಿಮಾಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡಿರುವ ಬಾಲಿವುಡ್‌ನ ಜನಪ್ರಿಯ ನಟ ರಾಹುಲ್ ಬೋಸ್ ಈಗ ಕನ್ನಡದಲ್ಲೂ ತಮ್ಮ ಖಾತೆ ತೆರೆದಿದ್ದಾರೆ. ಪೂರ್ಣ ಪ್ರಮಾಣದ ನಿರ್ದೇಶಕರಾಗಿ ಅಪೂರ್ವ ಕಾಸರವಳ್ಳಿ ನಿರ್ದೇಶನದ ಮೊದಲ ಚಿತ್ರ 'ನಿರುತ್ತರ'ದಲ್ಲಿ ಅವರು ಬಣ್ಣ ಹಚ್ಚಿದ್ದಾರೆ. ಇದರ ಶೂಟಿಂಗ್ ನಿಮಿತ್ತ ಈಚೆಗೆ ಬೆಂಗಳೂರಿಗೆ ಬಂದಿದ್ದ ರಾಹುಲ್, 'ಉಲ್ಲಾಸ'ದೊಂದಿಗೆ ಫಟಾಫಟ್ ಮಾತಿಗೆ ಸಿಕ್ಕಾಗ...

ಬೇಕು-ಬೇಡಗಳ ಮಧ್ಯೆ...

■ ಮದನ್ ಕುಮಾರ್ ಸಾಗರ

■ **'ನಿರುತ್ತರ'ದಲ್ಲಿ ನಿಮ್ಮದು ನಾಯಕನ ಪಾತ್ರವೇ?**

-ಈ ಚಿತ್ರದಲ್ಲಿನ ನಾಲ್ಕು ಮುಖ್ಯ ಪಾತ್ರಗಳಲ್ಲಿ ನನ್ನದೂ ಒಂದು. ಇಲ್ಲಿ ನಾಯಕ/ಖಳನಾಯಕ ಅಂತ ಯಾರೂ ಇಲ್ಲ. ನಿಜಜೀವನದಲ್ಲಿ ಇರುವಂತೆ ಈ ಪಾತ್ರಗಳಲ್ಲಿಯೂ ಎರಡೆರಡು ಗುಣಗಳು ಬೆರೆತಿರುತ್ತವೆ. ಅದೇ ಈ ಸಿನಿಮಾದ ವಿಶೇಷ.

■ **ನೀವು ಕನ್ನಡ ಸಿನಿಮಾವನ್ನು ಒಪ್ಪಿಕೊಂಡಿದ್ದಕ್ಕೆ ಕಾರಣ?**

-ಕಲೆಗೆ ಭಾಷೆಯ ಗಡಿಗಳಿಲ್ಲ. ಒಳ್ಳೆಯ ಪಾತ್ರ, ಕಥೆ, ನಿರ್ದೇಶಕರಿದ್ದರೆ ಯಾವ ಭಾಷೆಯಲ್ಲಿ ಬೇಕಾದರೂ ನಟಿಸುತ್ತೇನೆ. ಮಾಡುವ ಕೆಲಸ ನಮಗೆ ಜನಪ್ರಿಯತೆ ಮತ್ತು ಹಣಕ್ಕಿಂತಲೂ ಹೆಚ್ಚಾಗಿ ಆತ್ಮಸಂತೃಪ್ತಿ ನೀಡುವಂತಿರಬೇಕು. ಅದು ನನಗಿಲ್ಲಿ ಲಭಿಸಿದೆ. ವೇಗದ ಜಗತ್ತಿನಲ್ಲಿ ಸಂಬಂಧಗಳು ಬದಲಾಗುತ್ತಿವೆ. ಬದುಕಿನ ಪ್ರತಿಷ್ಠೆ ಮತ್ತು ವೈಯಕ್ತಿಕ ಬೇಕು-ಬೇಡಗಳ ನಡುವಿನ ಒದ್ದಾಟವೇ 'ನಿರುತ್ತರ'. ಈ ಅಂಶ ನನಗೆ ಹಿಡಿಸಿತು.

■ **ಅಪೂರ್ವ ಕಾಸರವಳ್ಳಿ ನಿರ್ದೇಶನ ಹೇಗನ್ನಿಸಿತು?**

-ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ ಸಿನಿಮಾಗಳು ಶ್ರೇಷ್ಠವಾಗಿವೆ. ಆಂಥವರ ಮಗ ಅಪೂರ್ವ ಎಂದಮೇಲೆ ಸಹಜವಾಗಿಯೇ ನನ್ನಲ್ಲಿ ಹೊಸ ಹುರುಪು ಮೂಡಿತು. ಈ ಚಿತ್ರ ಅತ್ಯುತ್ತಮವಾಗಿ ಮೂಡಿಬರುತ್ತೆ ಅನ್ನೋ ವಿಶ್ವಾಸವಿದೆ.

■ **ಬೆಂಗಳೂರಿನ ಜೊತೆ ನಿಮ್ಮ ನಂಟಿನ ಬಗ್ಗೆ ಹೇಳಿ.**

-ಬೆಂಗಳೂರು ನನಗೆ ಮೊದಲಿನಿಂದಲೂ ಇಷ್ಟದ ನಗರ. ನಮ್ಮ 'ದಿ ಫೌಂಡೇಶನ್' ಎಂಬ ಎನ್‌ಜಿಒ ಮೂಲಕ ಅನೇಕ ಮಕ್ಕಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಈ ಮಕ್ಕಳನ್ನು ನೋಡಲು ನಾನು ಆಗಾಗ ಇಲ್ಲಿಗೆ ಭೇಟಿ ನೀಡುತ್ತಿರುತ್ತೇನೆ. ಕ್ರೀಡೆ ಮತ್ತು ರಂಗಭೂಮಿ ಸಲುವಾಗಿಯೂ ಉದ್ಯಾನನಗರಿ ನನಗೆ ತುಂಬಾ ಹತ್ತಿರವಾಗಿದೆ. ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ ಮುಂತಾದವರ ಜೊತೆಗಿನ ಒಡನಾಟದಿಂದಾಗಿ ಈ ನಗರ ಇನ್ನಷ್ಟು ಆಪ್ತವಾಗಿದೆ.

■ **ನಿಮ್ಮ ಅಭಿನಯವಿರುವ ಇನ್ನಷ್ಟು ಕನ್ನಡ ಸಿನಿಮಾಗಳನ್ನು ನಿರೀಕ್ಷಿಸಬಹುದೇ?**

-ಮೊದಲೇ ಹೇಳಿದಂತೆ, ಉತ್ತಮ ನಿರ್ದೇಶಕರು ಮತ್ತು ಉತ್ತಮವಾದ ಕಥೆಗಳಿದ್ದರೆ ಕೇವಲ ಕನ್ನಡವಷ್ಟೇ ಅಲ್ಲದೆ ಯಾವ ಭಾಷೆಯಲ್ಲಾದರೂ ಅಭಿನಯಿಸುತ್ತೇನೆ. 'ನಿರುತ್ತರ'ದಲ್ಲಿ ನನ್ನ ಪಾತ್ರಕ್ಕೆ ನಾನೇ ಡಬ್ ಮಾಡುವ ಇಚ್ಛೆಯಿದೆ. ತಮಿಳಿನ 'ವಿಶ್ವರೂಪಂ'ಗೆ ನಾನೇ ಧ್ವನಿ ನೀಡಿದ್ದೆ. ಉಚ್ಚಾರಣೆಯಲ್ಲಿ ತಮಿಳಿಗಿಂತ ಕನ್ನಡವೇ ಸುಲಭ. ನೋಡೋಣ...

70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525 Mobile : 094482 21565, 094489 02288
E-mail : saramedianet@gmail.com, amrithjogi@gmail.com
www.saramedianet.com